ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ.898/2020 .

ಫ್ರಾ.ಸಾ.: 2
ಚಾ.ಸಾ.: 2

ಹೆಸರು : ಗಿರೀಶ್ ಚೌಗಲಿ
ತಂದೆಯ ಹೆಸರು : ಪ್ರಕಾಶ್ ಚೌಗಲಿ
ವಯಸ್ಸು : 32 ವರ್ಷ
ಉದ್ಯೋಗ : ವಲಯ ಅರಣ್ಯಾಧಿಕಾರಿ
ವಿಳಾಸ : ಶ್ರೀಮಂಗಲ.

... ............................................................................................................ ...

ದಿನಾಂಕ 27 ನೇ ಜೂನ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

ನಾನು ಈ ಪ್ರಕರಣ ದಾಖಲಾದ ಸಮಯದಲ್ಲಿ ಕಲ್ಲಹಳ್ಳದಲ್ಲಿ 2019 ರಿಂದ 2020 ರ ತನಕ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ- 26.08.2020 ರಂದು ಬೆಳಗ್ಗೆ 7.30 ರ ಸಮಯದಲ್ಲಿ ನಾನು ಮತ್ತು ಚಾಸಾ 1, ಚಾ ಸಾ 3 ಶ್ವಾನದಳದೊಂದಿಗೆ ಹುಲಿ ಮೃತಪಟ್ಟಿದ್ದ ಸ್ಥಳಕ್ಕೆ ಹೋದೆವು. ಅಲ್ಲಿಂದ ಶ್ವಾನ ದಳದವರು ವಾಸನೆ ಹಿಡಿಯುತ್ತಾ ಕಾಡಿನ ಮೂಲಕ ಸಿಬ್ಬಂದಿಯೊಂದಿಗೆ ತಪಾಸಣೆ ಮಾಡುತ್ತಾ ನಿಟ್ಟೂರು ಗ್ರಾಮದ ತಟ್ಟೆಕೆರೆ ಹಾಡಿ ಹತ್ತಿರ ಹೋಗಿರುತ್ತೇವೆ. ಶ್ವಾನವು ಸಂತೋಷ್ ಎಂಬುವವರ ಮನೆಯ ಬಳಿ ತೆರಳಿರುತ್ತದೆ. ಚಾಸಾ 4 ರವರನ್ನು ಕರೆಸಿ ಮಹಿಳಾ ಸಿಬ್ಬಂದಿ ಸಹಾಯದಿಂದ ಮನೆ ಶೋಧನೆ ಮಾಡಲಾಯಿತು. ಅವರ ಮನೆಯ ಮಂಚದ ಕೆಳಗೆ ಒಂದು ಸ್ಟೀಲ್ ಪಾತ್ರೆಯಲ್ಲಿ ಹಸಿ ಮಾಂಸ ಕಂಡುಬಂದಿರುತ್ತದೆ. ಅಡಿಗೆ ಮನೆಯಲ್ಲಿ ಕುಕ್ಕರ್ ನಲ್ಲಿ 100 ಗ್ರಾಂ ನಷ್ಟು ಮಾಂಸವನ್ನು ಬೇಯಿಸಿರುವುದು ಕಂಡು ಬಂದಿರುತ್ತದೆ. ಮನೆಯ ಅಟ್ಟವನ್ನು ಪರಿಶೀಲಿಸಿದಾಗ ಅಲ್ಯುಮಿನಿಯಂ ಪಾತ್ರೆಯಲ್ಲಿ ಜಿಂಕೆಯ 3 ಗೊರಸು ಕಂಡುಬಂದಿರುತ್ತದೆ. ಒಂದು ಸ್ಟೀಲ್ ಲೋಟದಲ್ಲಿ ಮೂಳೆಗಳು ಹಾಗೂ ಸಣ್ಣ ಸಣ್ಣ ಪ್ಲಾಸ್ಟಿಕ್ ವೈಯರ್ ನ ತುಂಡುಗಳು, ಪ್ಲಾಸ್ಟಿಕ್ ಚೀಲದಲ್ಲಿ ಸುಮಾರು 300 ಗ್ರಾಂ ನಷ್ಟು ಚೆಲ್ಸ್ ಇರುತ್ತವೆ. ಈ ಬಗ್ಗೆ ಸಂತೋಷ್ ರವರನ್ನು

ವಿಚಾರಿಸಿದಾಗ ಅವರು ಸರಿಯಾಗಿ ಉತ್ತರಿಸಿರುವುದಿಲ್ಲ. ಸಂತೋಷ್ ರವರನ್ನು ಕೋಳಿ ಸಾಕಾಣೆ ಮಾಡುವ ಸ್ಥಳದಲ್ಲಿ ಪರಿಶೀಲಿಸಿದಾಗ ಒಂದು ಮಾಂಸ ಕತ್ತರಿಸುವ ಕತ್ತಿ ಕಂಡುಬಂದಿರುತ್ತದೆ. ಸದರಿ ಮಾಂಸ ಮೇಲ್ನೋಟಕ್ಕೆ ಜಿಂಕೆ ಮಾಂಸದ ರೀತಿ ಕಂಡುಬಂದಿರುತ್ತದೆ. ಸಂತೋಷ್ ಈ ಬಗ್ಗೆ ಯಾವುದೇ ಉತ್ತರ ನೀಡಿರುವುದಿಲ್ಲ. ಆದ ಕಾರಣ ಕಲ್ಲಹಳ್ಳ ವಲಯ ಅರಣ್ಯ ಅಧಿಕಾರಿಗೆ ಮಾಹಿತಿ ನೀಡಿ ಪ್ರಕರಣ ದಾಖಲಿಸಿ ಸಂತೋಷ್ ರವರನ್ನು ಕರೆತಂದು ಅರಣ್ಯ ಅಧಿಕಾರಿ ಮುಂದೆ ಹಾಜರುಪಡಿಸಿರುತ್ತೇವೆ. ಮೇಲೆ ಹೇಳಿದ ಮಾಂಸ, ಚಿಲ್ ಹಾಗೂ ಮೂಳೆಗಳನ್ನು ಮಹಜರ್ ಮಾಡಿ ಅಮಾನತ್ತುಪಡಿಸಿರುತ್ತೇನೆ. ಆರೋಪಿಯನು ದಸ್ತಗಿರಿ ಮಾಡಿ ಆರೋಪಿಯ ಮೊಬೈಲ್ ಅನ್ನು ಅಮಾನತ್ತುಪಡಿಸಿರುತ್ತೇನೆ. ಆನಂತರ ಪ್ರಕರಣ ದಾಖಲಿಸಿರುತ್ತೇವೆ. ಚಾ ಸಾ 20 ರವರ ಮುಂದೆ ಆರೋಪಿಯನ್ನು ಹಾಜರುಪಡಿಸಿರುತ್ತೇವೆ. ಚಾಸಾ 20 ರವರು ಸಂತೋಷ ರವರನ್ನು ವಿಚಾರಿಸಿದಾಗ ಆರೋಪಿ 2 ರಿಂದ 4 ರವರ ಜೊತೆಗೆ ಸೇರಿ ಹುಲಿಗೆ ಗುಂಡು ಹೊಡೆದು ಸಾಯಿಸಿರುವುದಾಗಿ ಮತ್ತು ಸದರಿ ಹುಲಿಯ ಕಾಲನ್ನು ಕತ್ತರಿಸಿ ಹುಲಿಯ ಉಗುರು ಹಾಗೂ ಕೋರೆ ಹಲ್ಲುಗಳನ್ನು ಬೇರ್ಪಡಿಸಿರುವುದಾಗಿ ತಿಳಿಸಿರುತ್ತಾರೆ.

ಆರೋಪಿ 1 ರವರ ಹೇಳಿಕೆ ಮೇರೆಗೆ ಮರುದಿನ ಬೆಳಗ್ಗೆ 6.30 ಕ್ಕೆ ಚಾಸಾ 7, 5, ಚಾಸಾ 1, ಚಾಸಾ 6, ಮಹೇಶ್ ರವರೊಂದಿಗೆ ಬಾಳೆಲೆಯ ಸುಳುಗೋಡು ಗ್ರಾಮಕ್ಕೆ ಹೋಗಿರುತ್ತೇವೆ. ಆರೋಪಿ 2 ರವರ ಮನೆಗೆ ಹೋಗಿ ಪರಿಶೀಲಿಸಿದಾಗ ಒಂದು ಸೂಟ್ ಕೇಸ್ ನಲ್ಲಿ 2 ಜೀವಂತ ಕಾಡುತೂಸು ಇತ್ತು. ಅದನ್ನು ಮಹಜರ್ ಮಾಡಿ ಇಲಾಖಾ ಪರವಾಗಿ ಅಮಾನತ್ತುಪಡಿಸಿರುತ್ತೇವೆ. ಮನೆಯಲ್ಲಿ ಆರೋಪಿ 2 ರವರ ಸಹೋದರ ಇದ್ದು ಅವರನ್ನು ವಿಚಾರಿಸಿದಾಗ ಸದರಿ ಕಾಡುತೂಸು ಆರೋಪಿ 2 ರವರಿಗೆ ಸೇರಿದ್ದು ಎಂದು ತಿಳಿಸಿರುತ್ತಾರೆ. ಮಧ್ಯಾಹ್ನ 12 ಗಂಟೆಗೆ ಅಲ್ಲೆ ಪಕ್ಕದಲ್ಲಿದ್ದ ಆರೋಪಿ 3 ರವರ ಮನೆಗೆ ಶೋಧನೆಗೆ ಹೋಗಿರುತ್ತೇವೆ. ಚಾಸಾ 15 ಹಾಗೂ ಕಾಳ ರವರು ನಮ್ಮ ಜೊತೆಗೆ ಬಂದಿರುತ್ತಾರೆ. ಮನೆಯ ಕೊಠಡಿಯ ಕಬ್ಬಿಣದ ಬೀರುವಿನಲ್ಲಿ 2 ಪ್ಲಾಸ್ಟಿಕ್ ಕವರ್ ನಲ್ಲಿ ಚಿಲ್ ದೊರೆತಿರುತ್ತದೆ ಒಂದು ಕೆಂಪು ಬಣ್ಣದ ಖಾಲಿ ಕಾಡತೂಸು ದೊರೆತಿರುತ್ತದೆ. ಮನೆಯ ಪಕ್ಕದ ಕೊಠಡಿಯಲ್ಲಿ ಒಂದು ಮಚ್ಚು ದೊರೆತಿರುತ್ತದೆ ಅಲ್ಲಿಯೆ ಚಿಲ್ ಸಹ ದೊರೆತಿರುತ್ತದೆ ವಿಚಾರಣೆ ಮಾಡಿದಾಗ ಅವುಗಳನ್ನು ಶೇಖರಿಸಲು

ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ.ಮನೆಯ ಕೊಠಡಿಯಲ್ಲಿ ಸ್ಟೆಟರ್ ದೊರೆತಿದ್ದು, ಅದನ್ನು ಪರಿಶೀಲಿಸಿದಾಗ ಪ್ರಾಣಿಯ ಕೂದಲು ಇರುವುದು ಕಂಡುಬಂದಿರುತ್ತದೆ. ಶ್ವಾನ ದಳದ ಸಹಾಯದಿಂದ ಮನೆಯ ಸುತ್ತಲು ಪರಿಶೀಲಿಸಿದಾಗ ಪಕ್ಕದ ತೋಟದಲ್ಲಿ ಹೂತಿರುವ ಪ್ಲಾಸ್ಟಿಕ್ ಕವರ್ ಕಾಣಿಸಿತು ಅದನ್ನು ಹಗೆದು ನೋಡಿದಾಗ ಹುಲಿಯ ಕಾಲಿನ ಉಗುರಗಳನ್ನು ಹೊಂದಿರುವ 7 ಮಾಂಸದ ತುಂಡುಗಳು ದೊರೆತಿರುತ್ತವೆ, ಒಂದು ದವಡೆ ಹಲ್ಲಿನ ಮಾಂಸದ ತುಂಡು ದೊರೆತಿರುತ್ತವೆ. ಸದರಿ ವಸ್ತುಗಳನ್ನು ಮಹಜರ್ ಮಾಡಿ ಅಮಾನತ್ತುಪಡಿಸಿ ಚಾಸಾ 20 ರವರ ಮುಂದೆ ಹಾಜರುಪಡಿಸಿರುತ್ತೇವೆ.

ಅದೇ ದಿನ ಆರೋಪಿ 1 ರವರ ಮನೆಯಲ್ಲಿ ಅಮಾನತ್ತುಪಡಿಸಿಕೊಂಡ ಜಿಂಕೆಯ ಮಾಂಸ ಮತ್ತು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ನ್ಯಾಯಾಲಯದ ಆದೇಶ ಪಡೆದು ಮಾಂಸ ಹಾಗೂ ಕವಣೆಗಳನ್ನು ನಾಶಪಡಿಸಲಾಯಿತು.

ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೇಳಲಾಗಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.